ಡಾ। ಎಚ್. ಎಲ್. ತಿಮ್ಮೇಗೌಡ.—ಯೋಜನೆಯಲ್ಲಿ ಏನಾವುದು ಬಂದಿದೆ ಅದನ್ನು ತೆಗೆದು ಕೊಳ್ಳುತ್ತೇವೆ. ಈಗ ಬದಲಾವಣೆ ಮಾಡುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು.—ಮಾನ್ಯ ಸದಸ್ಯರಾದ ಪಂಪಾಪತಿಯವರೆ, ತಮ್ಮ ಪ್ರಶ್ನೆಯನ್ನು 5ನೇ ಆಗಸ್ಟ್ 1985ಕ್ಕೆ ಮುಂದೂಡಲಾಗಿದೆ.

ಶ್ರೀ ಆರ್. ಎನ್, ನಾಯಕ್.—ಸದಸ್ಯರು ಬಂದಿಲ್ಲ.
ಶ್ರೀ ಬಸವರಾಜ ಪಾಟೀಲ್.—ಸದಸ್ಯರು ಬಂದಿಲ್ಲ.
ಶ್ರೀ ಮಲ್ಲಾರಿಗೌಡ ಪಾಟೀಲ್ —ತಮ್ಮ ಪ್ರಶ್ನೆಯನ್ನು ಮುಂದೂಡಲಾಗಿದೆ.
ಶ್ರೀ ಶಿವಶೇಖರಪ್ಪಗೌಡ.—ತಮ್ಮ ಪ್ರಶ್ನೆಯನ್ನು ಮುಂದೆ ಹಾಕಲಾಗಿದೆ.

ಪ್ರಶ್ನೆ ನಂ. (105 461)

ವಿಷಯ : ತಾಲ್ಲೂಕು ಅಭಿವೃದ್ಧಿ ಮಂಡಳಿಗಳ ಹಾಗೂ ಪುರಸಭಾ ಆಸ್ಪತ್ರೆಗಳ ನೌಕರರ ಸೇವೆಗಳನ್ನು ಖಾಯಂಗೊಳಿಸುವುದು.

ಪ್ರ. ಸಂಖ್ಯೆ 105 (461) ಶ್ರೀ ಕೆ. ವಸಂತ ಬುಗೇರ (ಬೆಳ್ತಂಗಡಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) 1-4-1979 ಮತ್ತು 1-7-1981ರಿಂದ ಸರ್ಕಾರವು ವಹಿಸಿಕೊಂಡ ತಾಲ್ಲೂಕು ಮಂಡಳಿ ಮತ್ತು ಪುರಸಭೆ ಆಸ್ಪತ್ರೆಗಳ ನೌಕರರ ಸೇವೆಗಳನ್ನು ಕ್ರಮಬದ್ಧಗೊಳಿಸದಿರುವುದಕ್ಕೆ ಕಾರಣವೇನು ? ಹಾಗೂ ಅವರ ಸೇವೆಗಳನ್ನು ಯಾವಾಗ ಕ್ರಮಬದ್ಧಗೊಳಿಸಲಾಗುವುದು ?

ಡಾ. ಪಿಚ್. ಎಲ್. ತಿಮ್ಮೇಗೌಡ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

ಅ) ಕೆಲವು ಕ್ರಮ ಸಂಬಂದಿ ಕಾರ್ಯ ವಿಧಾನವನ್ನು ಅನುಸರಿಸಬೇಕಾಗಿದ್ದುದರಿಂದ ಕರ್ನಾಟಕ ಸರ್ಕಾರಿ ಸೇವಾ ನಿಯಮ (ಸರ್ಕಾರ ತನ್ನ ವಶಕ್ಕೆ ತೆಗೆದುಕೊಂಡ ವೈದ್ಯಕೀಯ ಸಂಸ್ಥೆಗಳ ನೌಕರರನ್ನು ವಿಲೀನಗೊಳಿಸುವ) ವಿಶೇಷ ನಿಯಮಗಳು 1985ನ್ನು ರೂಪಿಸುವುದು ವಿಳಂಬವಾಯಿತು, ಸರ್ಕಾರವು ಅರ್ಹತೆಯುಳ್ಳ ನೌಕರರನ್ನು ಸರ್ಕಾರಿ ನೌಕರರೆಂದು ಪರಿಗಣಿಸಲು ತೀರ್ಮಾನವನ್ನು ಕೈಗೊಂಡಿದೆ.

ಶ್ರೀ ಕೆ. ವಸಂತ ಬಂಗೇರ.—ಮಾನ್ಯ ಅಧ್ಯಕ್ಷರೆ, ಎಲ್ಲಾ ಸಿಬ್ಬಂದಿವರ್ಗದವರು ತ್ರಿಶಂಖು ಸ್ವರ್ಗದಲ್ಲಿದ್ದಾರೆ ತಕ್ಷಣ ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ ಎನ್ನುವ ಮಾತನ್ನು ಮಂತ್ರಿಗಳು ಹೇಳುತ್ತಿದ್ದಾರೆ. ಯಾವಾಗ ತೀರ್ಮಾನವನ್ನು ತೆಗೆದುಕೊಳ್ಳುತ್ತೀರಿ ? ಯಾವಾಗ ಸರ್ಕಾರಿ ಆಜ್ಞೆಯನ್ನು ಹೊರಡಿಸುತ್ತೀರಿ ಎಂಬುದನ್ನು ಸ್ಪಷ್ಟವಾಗಿ ತಿಳಿಸಬೇಕೆಂದು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

ಡಾ. ಎಚ್. ಎಲ್. ತಿಮ್ಮೇಗೌಡ.—ಸರ್ಕಾರ ತೆಗೆದುಕೊಂಡಂತಹ 319 ಅಲೋಪತಿ, 286 ಆಯುರ್ವೇದಿಕ್ ಸಂಸ್ಥೆಗಳಲ್ಲಿ ಕೆಲಸ ಮಾಡತಕ್ಕ ಎಲ್ಲಾ ನೌಕರರನ್ನು ಸರ್ಕಾರಿ ನೌಕರರೆಂದು ಪರಿಗಣಿಸಲು ಸಚಿವ ಸಂಪುಟದಲ್ಲಿ ತೀರ್ಮಾನವಾಗಿದೆ. ಅದು ರಾಜ್ಯಪಾಲರ ಸಹಿಗೆ ಹೋಗಿದೆ ಸ್ಕ್ರೂನಿಂಗ್ ಕಮಿಟಿ ಇದೆ, ಕ್ವಾಲಿಫಿಕೇಶನ್, ಎಲ್ಲವನ್ನು ನೋಡಿಕೊಂಡು ಅವರನ್ನೆಲ್ಲಾ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ವಸಂತ ಬಂಗೇರ.—ಎಷ್ಟು ಜನ ನೌಕರರು ತೊಂದರೆಗೆ ಒಳಗಾಗಿದ್ದಾರೆಂಬುದನ್ನು ತಿಳಿಸಬೇಕು ?

ಡಾ. ಎಚ್. ಎಲ್. ತಿಮ್ಮೇಗೌಡ.—ನನಗೆ ಅರ್ಥವಾಗಲಿಲ್ಲ, ತೊಂದರೆಗೆ ಏತಕ್ಕೆ ಒಳಗಾಗುತ್ತಾರೆ ?

ಶ್ರೀ ಕೆ. ವಸಂತ ಬಂಗೇರ.—ಅವರನ್ನೆಲ್ಲಾ ಸರ್ಕಾರಿ ನೌಕರರೆಂದು ಪರಿಗಣಿಸಲು ಸರ್ಕಾರಿ ಆಜ್ಞೆ ತಡವಾಗಿ ಬಂದದ್ದರಿಂದ ಎಷ್ಟು ಜನ ನೌಕರರಿಗೆ ತೊಂದರೆಯಾಗಿದೆ ?

ಡಾ. ಎಚ್. ಎಲ್. ತಿಮ್ಮೇಗೌಡ.—ಸ್ಕ್ರೂನಿಂಗ್ ಕಮಿಟಿಯಲ್ಲಿ ತೀರ್ಮಾನವಾಗುವವರೆಗೆ ಏನೂ ಹೇಳುವುದಕ್ಕೆ ಆಗುವುದಿಲ್ಲ.

ವಿಷಯ : ದೇವನಹಳ್ಳಿ ಪಟ್ಟಣದಲ್ಲಿ ಸರ್ಕಾರಿ ಆಸ್ಪತ್ರೆಯ ನಿರ್ಮಾಣ.

ಪ್ರ. ಸಂಖ್ಯೆ 106 (420) ಶ್ರೀ ಪಿ. ಸಿ. ಮುನಿಸ್ವಾಮಯ್ಯ (ದೇವನಹಳ್ಳಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯವಿಟ್ಟು ಉತ್ತರಿಸುವರೆ?

ಅ) ದೇವನಹಳ್ಳಿ ತಾಲ್ಲೂಕಿನ ದೇವನಹಳ್ಳಿ ಪಟ್ಟಣಕ್ಕೆ ಮಂಜೂರಾಗಿರುವ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯ ಕಟ್ಟಡ ನಿರ್ಮಾಣದ ಕಾರ್ಯದ ಬಗ್ಗೆ ಸರ್ಕಾರವು ಕ್ರಮ ಕೈಗೊಂಡಿದೆಯೆ ;